ಮಾತ್ರ ಆಯ್ಕೆ ಮಡಿಕೊಳ್ಳುತ್ತದೆ' ಎಂದು ಬರೆದಿದ್ದನ್ನು ನೋಡಿ ಪುಳಕಿತನಾಗಿದ್ದ. ಆದರೆ ರೂಮಿಗೆ ಬಂದ ಮೇಲೆ ಅವನ ತುಂಟ ಗೆಳೆಯ ಆ ಸಾಲನ್ನು ನೋಡಿ, 'ಪಾಪ, ಕಲೆ ಅವರನ್ನೇ ಆಯ್ಕೆ ಮಾಡಿಕೊಂಡಿಲ್ಲ!' ಎಂದು ಹಾಸ್ಯ ಮಾಡಿದ್ದ. ಈಗ ಶಂಭುವಿಗೆ ನೆನಪಾದರೆ ಆ ಮಾತು ತನಗೇ ಹೇಳಿದ ಹಾಗೆ ಅನಿಸುತ್ತದೆ.

ಇದರ ನಡುವೆ, ಎಲ್ಲ ಜಡ್ಡುಗಟ್ಟುತ್ತಿದೆ ಎನ್ನುವಾಗ ಹುಡುಗಿಯೊಬ್ಬಳ ಪರಿಚಯವಾಯಿತು. ಸ್ನೇಹ ಬಂಧವಾಯಿತು. ಯೌವನದಲ್ಲಿ ಮಾಡಲಾಗದ ಪ್ರೀತಿ ಪ್ರಣಯಗಳು ಕುಣಿದಾಡಿದವು. ಆ ಸಂಬಂಧ ನೀಡಿದ ಮುದ ಮಧ್ಯ ವಯಸ್ಸಿನ ಅವನಿಗೆ ಹೊಸ ಹುರುಪು ನೀಡುವಂತಿತ್ತು. ಆದರೆ ಅದೂ ಬತ್ತಿ ಹೋಗುತ್ತದೆ ಎಂದು ಕಾಣಲುತೊಡಗಿದೆ. ಏನೊ ಸಾಧಿಸಬೇಕೆಂಬವನ ವಿಫಲ ಪ್ರಯತ್ನ, ಬದುಕಿಗೆ ಬೇರೆಯದೇನೊ ಬೇಕೆಂಬ ದಾಹ, ಮನಸ್ಸಿನ ಬಯಕೆಗಳ ಕಾತರ, ಏನು ಮಾಡಿದರೂ ಪಿಸುಗುಡುವ ಯಾವುದೊ ವಿಷಾದ ಎಲ್ಲ ಎಲ್ಲ ಸಂಪರ್ಕ, ಸಂಬಂಧದ ಟೊಳ್ಳನ್ನು ತೋರಿಸುತ್ತಿದ್ದುದು ಈಗೀಗ ಅರಿವಿಗೆ ಬರತೊಡಗಿ, ಅಪ್ಪ ಅಷ್ಟಷ್ಟಾಗಿ ಅರ್ಥವಾಗತೊಡಗಿದ್ದ. ಅವನಿಗೆ ಅವರಷ್ಟು ಧೈರ್ಯ, ಸಾಹಸಗಳಿರಲಿಲ್ಲ. ಆದರೂ ಅವರನ್ನು ಆಲಂಗಿಸಿಕೊಳ್ಳುವಂಥ ಸಂಬಂಧ ಮಾತ್ರ ಸಾಧ್ಯವಾಗುತ್ತಿರಲಿಲ್ಲ. ಮನೆಗೆ ಹೋದರೂ, ಅಂಥ ಯಾವ ವೈಮನಸ್ಸು ಇಲ್ಲದಿದ್ದರೂ ಪೂರ್ತಿಯಾಗಿ ತೆರೆದುಕೊಂಡು ಆತ್ಮೀಯವಾಗಿ ಮಾತನಾಡಲು ಆಗುತ್ತಿರಲಿಲ್ಲ. ಕರಗಲಾರದ ಮೌನವೊಂದು ಅವರ ನಡುವೆ ಇರುತ್ತಿತ್ತು. ಅವನು ನೌಕರಿಯಲ್ಲಿ ಇರುವ ಊರಿಗೆ ಅವರು ಬಂದಾಗಲೂ ಪರಿಸ್ಥಿತಿ ರಾಶಿ ಬದಲಾಗುತ್ತಿರಲಿಲ್ಲ. ಅವರು ಸಂಡಾಸಿಗೆ ಹೋದರೆ ಕೈ ಕಾಲು ತೊಳೆಯದೆ ಬರುವುದು, ಏನೇನಾದರೂ ಬಾಯಿಗೆ ಬಂದಿದ್ದು ಮಾತಾಡುವುದು ಎಲ್ಲ ಮಡದಿಯ ಕಾರಣದಿಂದಲೊ ಏನೊ ಅವನಿಗೂ ಅಸಹನೀಯವಾಗುತ್ತಿತ್ತು. ಜೊತೆಗೆ, ಅವನು ಬಾಲ್ಯದಲ್ಲಿ ಕಂಡ ಅವರ ದರ್ಪ, ಠೇಂಕಾರಗಳು ಅವರಲ್ಲಿ ಮತ್ತೆ ಇಣುಕಿದಂತಾಗಿ ಮೈ ಉರಿಯುತ್ತಿತ್ತು. ಹಾಗೆಯೇ, ಅವರು ಕೆಲ ದಿನವಿದ್ದು ಊರಿಗೆ ಹೋದಮೇಲೆ ನಾನು ಹಾಗೆ ಹೇಳಬಾರದಿತ್ತು, ನಡೆದುಕೊಳ್ಳಬಾರದಿತ್ತು ಎಂಬ ವಿಚಿತ್ರ ವಿಷಾದ ಆವರಿಸುತ್ತಿತ್ತು...

ಇವೆಲ್ಲ ಹದಿನೈದು ಇಪ್ಪತ್ತು ವರ್ಷಗಳಲ್ಲಿ ಆಗಿಹೋದ ಸಂಗತಿಗಳು.

## 3

ಆ ರಾತ್ರಿ ಒಂದೇ ಸಮನೆ ಮೊಬೈಲ್ ರಿಂಗಾಗತೊಡಗಿತು. ಅರ್ಧಮರ್ಧ ಎಚ್ಚರದಲ್ಲಿ, ಯಾರದೆಂದು ಬೆಳಿಗ್ಗೆ ನೋಡುವಾ ಎಂದು ಶಂಭು ಮುಸುಕೆಳೆದು ಮಲಗಿದ. ಮತ್ತೆ ಫೋನು. ಯಾಕೊ ಸಣ್ಣ ಅನುಮಾನ ಬಂತು. ಎರಡು ದಿನದ ಹಿಂದೆ ಅಣ್ಣ ಶಾಂತಾರಾಮ ಫೋನ್ ಮಾಡಿ, 'ಅಪ್ಪ ಕೆಲವು ದಿಗಳಿಂದ ಕೆಟ್ಟ ಹಟ ಮಾಡತಿದ್ದ, ಆಸ್ಪತ್ರೆಗೆ ಕರ್ಕಂಡ್ ಹೋಗು ಹೇಳಿ. ಅವನಿಗೆ ಮತ್ತೇನು ಎಂಥದೂ ಆಯ್ದಿಲ್ಲೆ. ಅಲ್ಲಿ ಕರ್ಕಂಡು ಹೋದರೆ ಆಸ್ಪತ್ರೆಯಲ್ಲಿ ಇರುವವರು ಯಾರು? ನಾನು, ಒಂದು ವರ್ಷ ಆತು, ಮಣಿಪಾಲಿಗೆ, ಅಲ್ಲಿಗೆ ಇಲ್ಲಿಗೆ ಕರ್ಕಂಡ್ ಹೋಗತಿದ್ದದ್ದು. ಆಸ್ಪತ್ರೆಯಲ್ಲಿ ಇರುವುದೆಲ್ಲವನ್ನೂ ಇಲ್ಲಿ ಮಾಡಿ ಕೊಟ್ಟಿದ್ದೆ. ಆದರೂ ಕೇಳ್ತನಿಲ್ಲೆ. ಊರ ಕೆಲವರನ್ನು ಕರೆಸಿ ಹೇಳಿಸಿದೆ. ಇವತ್ತು ಭಾವನ ಕರೆಸುತ್ತೇನೆ. ನೀನು ಬಂದು ಬಗೇಲಿ ಬುದ್ಧಿ ಹೇಳು...' ಎಂದಿದ್ದ.

ಈಗ ಎರಡು ಮೂರು ತಿಂಗಳ ಹಿಂದೆ, ಆಸ್ಪತ್ರೆಗೆ ಸೇರಿಸಿದಾಗಲೂ ಫೋನು ಮಾಡಿದ್ದ ಅಣ್ಣ.